ಸೃಜನಿ

**SRUJANI: Indian Journal of Innovative Research and Development (SIJIRD)**
Volume-2 Issue 4, September-October 2023, Pp. 178-182
Bi-Monthly, Peer-Reviewed, Open Access, Indexed Journal

**I S S N: 2583-3510**
SIRDF JOURNALS
editor@srujani.in
www.srujani.in

# ಕೊರವಂಜಿಯ ವ್ಯಕ್ತಿತ್ವ ಮತ್ತು ಸಾಮಾಜಿಕ ಚಿತ್ರಣ

**ಬಸಪ್ಪ ಭಜಂತ್ರಿ**
ಸಂಶೋಧನಾ ವಿದ್ಯಾರ್ಥಿ, ಹಸ್ತಪ್ರತಿಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

***Abstract:***
*ಶ್ರೀಕೃಷ್ಣ ಪಾರಿಜಾತ ರುಕ್ಮಿಣಿ ಕೃಷ್ಣ ಹಾಗೂ ಸತ್ಯಭಾಮೆಯರ ಕೌಟುಂಬಿಕ ಜಗಳವನ್ನು ಬಗೆಹರಿಸುವವಳು ಕೆಳಜಾತಿಯ ಕೊರವಂಜಿ. ವಾರಿಜಾಕ್ಷೀಯ ಮನೋವಿಕಾರ ಮಾಡುವೆನೆಂದು ನಾರಾಯಣಿಯೆಂಬ ಕೊರವಿ ರೂಪ ಎನ್ನುವ ನಾರದ ಕೊರವಂಜಿ, ಬ್ರಹ್ಮಕೊರವಂಜಿ, ಉಪಾದೇಯಗಳು ತ್ರಿಮೂರ್ತಿಗಳೇ ಕೊರವಂಜಿಯಾಗಿ ಅವತಾರ ತಾಳುವ ಕುತೂಹಲ ಸಂಗತಿಗಳನ್ನು ಹೇಳುತ್ತದೆ. ಒಂದು ರೀತಿ ಶೃಂಗಾರ ಪ್ರಧಾನವಾದ ರಂಗಭೂಮಿಯಲ್ಲಿ ವಿಯೋಗ ಸಂಯೋಗಗಳ ನಾಟಕ ಮಾಡಿ ತೋರುವಳು ಕೊರವಂಜಿ. ಕೃಷ್ಣ, ಬ್ರಹ್ಮ, ನಾರದ, ಮನ್ಮಥ ಇವರೆಲ್ಲ ಕೊರವಂಜಿ ರೂಪಾಂತರದಲ್ಲಿ ತಮ್ಮನ್ನು ರೂಪಧಾರಣೆ ಮಾಡುವುದಾದರೆ ಅವರ ವ್ಯಕ್ತಿತ್ವ ಕೊರವಂಜಿಯಲ್ಲಿ ಅಡಗಿದೆ. ಇದೊಂದು ಜೀವ-ಪರಮಾತ್ಮರ ತಾತ್ವಿಕ ಸಮಸ್ಯೆಯೂ ಹೌದು, ಮಾತು ಮತ್ತು ಲಿಪಿಯ ಸಮಸ್ಯೆಯೂ ಹೌದು. ಈ ಹಿನ್ನೆಲೆಯಲ್ಲಿ ಕೊರವಂಜಿಯ ವ್ಯಕ್ತಿತ್ವ ಮತ್ತು ಸಾಮಾಜಿಕ ಚಿತ್ರಣವನ್ನು ಈ ಲೇಖನದಲ್ಲಿ ಪ್ರಸ್ತುತಪಡಿಸಲಾಗಿದೆ.*

***Keywords:*** *ಪಾರಿಜಾತ, ಕೊರವ, ಕೊರವಂಜಿ, ಜ್ಯೋತಿಷ್ಯ, ಕಣಿ, ಜಾತಕ, ಸಾಮಾಜಿಕ ಚಿತ್ರಣ.*

**ಪೀಠಿಕೆ**

ಪಾರಿಜಾತದಲ್ಲಿ ಸತ್ಯಭಾಮೆ ಹಾಗೂ ಕೊರವಂಜಿ ಪಾತ್ರ ಮಾಡುತ್ತಿದ್ದ ಕೌಜಲಗಿ ನಿಂಗವ್ವ, ಎಲ್ಲವ್ವ ರೊಡ್ಡಪ್ಪನವರಂತಹ ತೀರ ಅಂಚಿನ ಸಮುದಾಯ ದಿಂದ ಬಂದ ಸ್ತ್ರೀ, ಭವಿಷ್ಯ, ಕುಂಡಲಿ, ಜಾತಕ, ಜ್ಯೋತಿಷ್ಯ, ಶಕುನ ಇತ್ಯಾದಿ ಹೇಳುವ ಶಾಸ್ತ್ರ ಪಂಡಿತರು, ಜೋತಿಷ್ಯಗಾರರ ಮಧ್ಯೆ ಸಾಂತ್ವಾನ ಹೇಳುವ ಕೊರವಂಜಿಯೆಲ್ಲಿ? ಶಕುನ ಹೇಳುವುದು ಒಂದು ಮನಃಶಾಸ್ತ್ರೀಯ ಕಲೆ. ತನ್ನೆದುರಿಗಿರುವವರ ಮನಸ್ಸನ್ನು ಅರ್ಥಮಾಡಿಕೊಂಡು ಆತ್ಮವಿಶ್ವಾಸ ತಿಳಿಸುವ ಕೆಲಸ ಅಸಾಮಾನ್ಯವೇನಲ್ಲ. ಹೆಣ್ಣಿನ ವಿಧ್ಯೆ ಹಾಗೂ ಇರುವಿಕೆಯನ್ನು ಕಡೆಗಣಿಸಿರುವ ಈ ಸಮಾಜದಲ್ಲಿ ಕೊರವಂಜಿಯಂತಹ ಲೋಕಜ್ಞಾನ ಹೊಂದಿದ ಮಹಿಳೆಯರು ತೀರಾ ಕಡಿಮೆ. ಮಹಿಳಾ ಜ್ಞಾನದ ಮಾದರಿಗಳನ್ನು ಅನೇಕ ರೀತಿಯಲ್ಲಿ ನೋಡಲು ಹವಣಿಸಿರುತ್ತಾರೆ.

ಒಂದರ್ಥದಲ್ಲಿ ಹೇಳುವುದಾದರೆ ತೆಲುಗು ದೇಶದಲ್ಲಿ ಇವರನ್ನು 'ಯರಕುಲವಾಂಡ್ಲು' ಅಥವಾ 'ಕೊರಚವಾಂಡ್ಲು' ಎಂದು ಕರೆಯಲಾಗುತ್ತದೆ. ಯರಕುಲವಾಂಡ್ಲು ಎಂದರೆ ಭವಿಷ್ಯ ಹೇಳುವವರು ಎಂದರ್ಥ. ಇನ್ನೊಂದರ್ಥದಲ್ಲಿ ತೆಲುಗು ಕಾವ್ಯಗಳಲ್ಲೂ ಕೊರವಂಜಿಯ ಉಲ್ಲೇಖ ಹೇರಳವಾಗಿ ಸಿಗುತ್ತದೆ. ಅಯ್ಯಲ್ಲರಾಜು ರಮಾಭದ್ರಕವಿಯ ರಾಮಾಭ್ಯುದಯಂ ಕಾವ್ಯದಲ್ಲಿ ಕೊರವಂಜಿ ಹೇಳಿಕೆ ಬಗ್ಗೆ ಪ್ರಸ್ತಾಪ ಬರುತ್ತದೆ. ವಿಜಯ ರಾಘವನ್

***Please cite this article as:*** ಬಸಪ್ಪ ಭಜಂತ್ರಿ. (2023). ಕೊರವಂಜಿಯ ವ್ಯಕ್ತಿತ್ವ ಮತ್ತು ಸಾಮಾಜಿಕ ಚಿತ್ರಣ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(4), 178–182.

ನಾಯಕ ಅವರು ಕೊರವಂಜಿ ನೃತ್ಯದ ಬಗ್ಗೆ ರಘು–ನಾ–ಥಾ–ಭ್ಯುದಯಮ್ ರಘುನಾಥ ನಾರಾಕಾಭ್ಯುದಯಂ ಪ್ರಹ್ಲಾದಚರಿತಾದಲ್ಲಿ ಉಲ್ಲೇಖವಿರುವುದನ್ನು ಪ್ರಸ್ತಾಪಿಸುತ್ತಾರೆ. ತಮಿಳಿನಲ್ಲಿ **'ಕುರುಮೆ'** ಎಂದರೆ ಗುಡ್ಡಗಾಡು ಮಹಿಳೆ ಎಂದೂ **'ವಂಜಿ'** ಎಂದರೆ ಕಣಿ ಹೇಳುವ ಮಹಿಳೆ ಎಂದೂ ಅರ್ಥವಿದೆ. ಕೊರವಂಜಿ ಎನ್ನುವುದಕ್ಕೆ ಇನ್ನೊಂದು ಅರ್ಥವನ್ನು ಇಲ್ಲಿ ಹೇಳಲಾಗಿದೆ. ಕೊರವ ಅಂದರೆ ಒಂದು ಜನಾಂಗವೆಂದು, ಅಂಜಿ ಎಂದರೆ ಹೆಜ್ಜೆ ನೃತ್ಯದ ರೀತಿ ಎಂತಲೂ ಅರ್ಥೈಸಲಾಗುತ್ತದೆ.

ಕುರುವರು ಎಂದರೆ ದಕ್ಷಿಣ ಭಾರತದಲ್ಲಿ ಅಲೆಮಾರಿ ಸಮುದಾಯದವರೆಂದು ಹೇಳಲಾಗುತ್ತದೆ. ಇವರು ಬುಟ್ಟಿ ಹೆಣೆಯುವುದರಿಂದ ಹಿಡಿದು ಭವಿಷ್ಯ ಹೇಳುವ ಮೂಲಕ ಜೀವನ ಸಾಗಿಸುತ್ತಾರೆ. ತುಳು ನಿಘಂಟಿನಲ್ಲಿ ಕೊರವಿ, ಕೊರಜ್ಜಿ, ಕೋರಾಜಿ, ಕೊರವಂಜಿ ಎಂದು ಗುರುತಿಸಿ ಹಾಗೆಯೇ ಇದೊಂದು ಅಲೆಮಾರಿ ಜನಾಂಗ ಎಂದು ಸೂಚಿಸಲಾಗಿದೆ. ತಮಿಳಿನಲ್ಲಿ **'ಕುರುವಣಿ'** ಅಂದರೆ ಕುರುವ ಬುಡಕಟ್ಟಿನ ಮಹಿಳೆ, ವಂಚಿ ಎಂದರೆ ಭವಿಷ್ಯ ಹೇಳುವವರು ನಟನಾತ್ಮಕವಾಗಿ ಭವಿಷ್ಯ ಹೇಳುವ ಹೆಣ್ಣುಮಗಳು ಎಂದು ಗುರುತಿಸಲಾಗುತ್ತದೆ. ಕಣಿ ಎನ್ನುವ ಪದವು ಸಂಸ್ಕೃತದ 'ಗಣಿಕಾ' ಎಂಬ ಶಬ್ದದಿಂದ ನಿಷ್ಪನ್ನ ಹೊಂದಿದೆ. ಕಣಿ ಎಂದರೆ ಭವಿಷ್ಯ ಶಾಸ್ತ್ರ, ಜ್ಯೋತಿಷ್ಯ, ಎಂದರ್ಥ. ಇಂಗ್ಲಿಷ್‌ನಲ್ಲಿ ಪ್ರೆಡಿಕೇಶನ್, ಡಿವಿನೇಷನ್ ಎನ್ನುತ್ತಾರೆ. ಕೇರಳ ಮತ್ತು ತಮಿಳುನಾಡಿನಲ್ಲಿ ಕಣಿಯ ಜನಾಂಗದ ಮೂಲವನ್ನು ಕುರಿತು ಹಲವು ಕುಲ ಪುರಾಣಗಳು ಪ್ರಚಲಿತದಲ್ಲಿವೆ. ಆದರೆ ಕರ್ನಾಟಕದ ಕಣಿಯವರನ್ನು ಕುರಿತು ಅಧ್ಯಯನಕ್ಕೆ ಒಳಪಡಿಸಿದಾಗ ಅವರ ಜನಾಂಗದ ಪುರಾಣಗಳನ್ನು ಮರೆತು ಹೋಗಿರುವುದು ಕಂಡು ಬಂದಿತು. ಅವರಿಗೆ ತಮ್ಮ ಮಾತೃಭಾಷೆ ಮತ್ತು ಕುಲಪುರಾಣಗಳು ಮರೆಯಾಗಿವೆ. ಈ ಕಾರಣದಿಂದ ಕೆಲವು ಪಾಶ್ಚಿಮಾತ್ಯ ಸಂಶೋಧಕರು ಕಣಿಯರನ್ನು ಕುರಿತು ನೀಡಿರುವ ಮಾಹಿತಿಯು ದೊರೆಯುತ್ತದೆ. ಕಣಿಯರ ಭಾಷೆಯು ಇತರ ರಾಜ್ಯಗಳಿಂದ ವಲಸೆ ಬಂದರೂ ಕನ್ನಡವನ್ನು ಮಾತೃಭಾಷೆಯಾಗಿ ಹೊಂದಿದ್ದಾರೆ. ಇವರಲ್ಲಿ ಕೆಲವರು ತಮಿಳು ಭಾಷೆಯನ್ನು ಮಾತನಾಡುತ್ತಾರೆ. ಕೆಲವೊಂದು ಬಾರಿ ಇವರು ಮಲಯಾಳದ ಒಂದು ಜಾತಿ ಎಂದು ಗುರುತಿಸಿಕೊಂಡರೂ ಮಲಯಾಳ ಭಾಷೆಯನ್ನು ಮಾತನಾಡುವುದಿಲ್ಲ. ಯಂತ್ರ ಕಟ್ಟುವಾಗ, ದೆವ್ವ ಬಿಡಿಸುವಾಗ, ಮಲಯಾಳ ಭಾಷೆಯಲ್ಲಿ ಮಂತ್ರಗಳನ್ನು ಹೇಳುತ್ತಾರೆ.

ಕೆಲವು ಶತಮಾನಗಳ ಹಿಂದೆ ವಲಸೆ ಬಂದಿರುವುದರಿಂದ ಇವರಿಗೆ ಅವರ ಮಾತೃಭಾಷೆ ಮರೆತು ಹೋಗಿರುವ ಸಾಧ್ಯತೆಗಳಿವೆ. ಕಿಟಲ್ ಕೋಶದಲ್ಲಿ ಕೊರವರ ಹೆಣ್ಣುಮಗಳು, ಭವಿಷ್ಯ ಹೇಳುವವಳು ಎಂದರ್ಥ ನೀಡಲಾಗಿದೆ. ಸೂರ್ಯ ನಾರಾಯಣನಾಂದ್ರ ನಿಘಂಟಿನಲ್ಲಿ ಕೊರವ ಸಮುದಾಯದ ಮಹಿಳೆ ಎಂದರ್ಥವಿದೆ. ಕರ್ನಾಟಕ ಜಾನಪದ ಕೋಶದಲ್ಲಿ ಕೊರವಂಜಿ ಅಂದರೆ ಕಣಿ ಹೇಳುವ ಕೊರವರ ಹೆಂಗಸು ಇವರು ಭವಿಷ್ಯವನ್ನು ಹಾಡಿನ ದಾಟಿಯಲ್ಲಿ ಹೇಳುತ್ತಾರೆ ಎಂದರ್ಥ ನೀಡಲಾಗಿದೆ. ಕೊರವರ ಸ್ತ್ರೀಗೆ ಕೊರವಂಜಿ ಎಂದು ಹೆಸರು, ಕೊರವಂಜಿ ತನ್ನ ನಿತ್ಯ ಜೀವನಕ್ಕಾಗಿ ಭಿಕ್ಷೆ ಬೇಡುತ್ತಾ ಮನೆ ಮನೆಗೆ ಅಲೆದಾಡಿ ಕಣಿ ಶಕುನ ಕಲೆಯನ್ನು ಕರಗತ ಮಾಡಿಕೊಂಡಿರುತ್ತಾಳೆ. ಕಣಿ ಹೇಳುವವರು ಸಾಮಾನ್ಯವಾಗಿ ಹಳ್ಳಿಯ ಪರಿಸರದ ಹೆಣ್ಣುಮಕ್ಕಳು ಜನರ ಚಿಂತೆ ಮನಸ್ಥಿತಿ ಭಾವನೆಗಳನ್ನು ಅರ್ಥಮಾಡಿಕೊಂಡು ಅವರಿಗೆ ತೃಪ್ತಿಯಾಗುವಂತೆ ಕಣಿ(ಭವಿಷ್ಯ) ಹೇಳಿ ಸೈಎನಿಸಿಕೊಂಡಿರುವ ಜಾಣ್ಮೆ ಕೊರವಂಚಿಯದು. ಕೊರವಂಜಿಯವರು ಕೊರವ ಜಾತಿಯವರು ಮನೆಗೊಂದು ಹೆಣ್ಣು ಕೊರವಂಜಿಯಾಗಬೇಕೆಂಬ ಪರಿಪಾಠವಿದೆ. ಇಲ್ಲದಿದ್ದರೆ ಎಲ್ಲಮ್ಮ ಕಾಡುತ್ತಾಳೆಂಬ ನಂಬಿಕೆಯಿದೆ. ಅಲೆಮಾರಿ ಜನಾಂಗಗಳಲ್ಲಿ ಒಂದು ಸಮುದಾಯದ ಕೊರವಂಜಿಗಳು ಜನಪದ ಗಾಯಕರು ಹೌದು, ವೃತ್ತಿಗಾಯಕರು ಹೌದು, ಒಂದು ಕಾಲದಲ್ಲಿ ದಕ್ಷಿಣ

ಭಾರತದಲ್ಲೆಲ್ಲ ಇವರು ಹೆಸರು ಪ್ರಸಿದ್ಧವಾಗಿತ್ತು. ಕೊರವಂಜಿ ಶಬ್ಧ ದ್ರಾವಿಡ ಭಾಷೆಗಳಲ್ಲೆಲ್ಲ ಕಂಡುಬರುತ್ತದೆ. ಕೊರವಂಜಿಯನ್ನು ಕೊರವತಿ ಯರೆಂದು ಕರೆಯಲಾಗುತ್ತದೆ. ಬುಟ್ಟಿಹೆಣೆಯವುದು, ಕಸಬರಿಗೆ ಕಟ್ಟುವುದು, ಬೇಟೆಯಾಡುವುದು ಇವರ ಮುಖ್ಯ ಕೆಲಸ. ಭವಿಷ್ಯ ಹೇಳುವ ಕಸುಬನ್ನು ಅವಲಂಬಿಸಿರುವ ಹೆಂಗಸರು ಕೊರವಂಜಿಗಳೆಂದು ಪರಿಚಿತರಾಗಿದ್ದಾರೆ. ಇದು ಕೊರವಂಜಿ ಮತ್ತು ಆ ಸಮುದಾಯದ ಬಗ್ಗೆ ವಿವಿಧ ವಿದ್ವಾಂಸರು ಹಾಗೂ ನಿಘಂಟುಗಳು ನಿರ್ವಚಿಸಿದ ಅರ್ಥಗಳಾಗಿವೆ. 'ಕಣಿ' ಕೊರವಂಜಿಯು ಸ್ತ್ರೀಯರಿಗೆ ಮಾತ್ರ ಪ್ರೀತಿ ಪ್ರಣಯ ಹಾಗೂ ವಿರಹಗಳ ಕುರಿತಾಗಿ ಹೇಳುವುದಾಗಿದೆ.

'ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು' ಎಂಬ ಪುಸ್ತಕದಲ್ಲಿ ಶ್ರೀ ಕೃಷ್ಣ ತನ್ನಲ್ಲಿ ಅನುರಕ್ತಳಾದ ರುಕ್ಮಿಣಿಯ ಅಂತರಂಗವನ್ನು ತಿಳಿಯಲು ಅವಳ ಮಂದಿರಕ್ಕೆ ಕೊರವಂಜಿ ವೇಷದಲ್ಲಿ ಹೊಗುವ ಕಥೆಯು ಇದೆ. ಎಲ್ಲಮ್ಮನ ಕಥೆಯಲ್ಲಿ ಬರುವ ಕೊರವಂಜಿ ಪ್ರಸಂಗದಲ್ಲಿ ಓರಂಗಲ್ಲಿನ ರಾಜ ಸಕಲ ದೇವತೆಗಳಿಂದ ಸೇವೆ ಮಾಡಿಸಿಕೊಳ್ಳುತ್ತಿರುತ್ತಾನೆ. ಜೊತೆಗೆ ದೇವಿಯಾದ ಯಲ್ಲಮ್ಮನ ಮೇಲೆ ನಾರಾಯಣನ ಚಿತಾವನೆಯಿಂದ ಅನುರಕ್ತನಾಗುತ್ತಾನೆ. ಅವಳನ್ನು ಎಳೆದು ತರಲು ಹೇಳುತ್ತಾನೆ. ಇಂತಹ ರಾಜನ ಅಹಂಕಾರ ಮುರಿಯಲು ಎಲ್ಲಮ್ಮ ಉರಿಯ ಭಂಡಾರ ಎಂಬ ರೋಗ ಬರುವ ಹಾಗೆ ಮಾಡುತ್ತಾಳೆ. ರೋಗ ನಿವಾರಣೆಗಾಗಿ ಕಣಿ ಹೇಳಲು ಬಂದು ರಾಜನ ತಪ್ಪಿನ ಅರಿವಾಗುವಂತೆ ಮಾಡುತ್ತಾಳೆ. ಕೊರವಂಜಿ ಎಂಥ ಪ್ರಭಾವಿ ಹಾಗೂ ಆಕರ್ಷಕ ವ್ಯಕ್ತಿತ್ವ ಅಂದರೆ ಶಿಷ್ಟ ಪರಂಪರೆ ಕೂಡಾ ಇವಳನ್ನು ತನ್ನ ಪರೀದಿಯಲ್ಲಿ ಸೆಳೆದುಕೊಂಡಿದೆ. ಅನೇಕ ಶಿಷ್ಟ ಕಾವ್ಯ ಮತ್ತು ಅನೇಕ ಕಥೆಗಳಲ್ಲಿ ಕೊರವಂಜಿ ಒಂದು ತಂತ್ರವಾಗಿ ರೂಪಿತವಾಗಿದ್ದಾಳೆ. ಕಥೆಗೆ ಹೊಸ ರೂಪ ನೀಡಲು ಪಾತ್ರಗಳಲ್ಲಿ ಸಂಧಾನವೇರ್ಪಡಿಸಲು ಆತಂಕದಲ್ಲಿರುವ ಪಾತ್ರಕ್ಕೆ ಸಮಾಧಾನ ಹೇಳಿ ಭವಿಷ್ಯದ ಸೂಚನೆ ತಿಳಿಸಲು ಕೊರವಂಜಿ ಬಳಸಲ್ಪಟ್ಟಿದ್ದಾಳೆ.

ದೇವತೆಗಳನ್ನು ಕೂಡ ಕೊರವಂಜಿಯ ರೂಪದಲ್ಲಿ ಚಿತ್ರಿಸಿ ಖುಷಿಪಡಿಸಲಾಗಿದೆ. ಬ್ರಹ್ಮಕೊರವಂಜಿ, ನಾರದಕೊರವಂಜಿ, ಕೃಷ್ಣಕೊರವಂಜಿ ಮುಂತಾದ ಹೆಸರಿನ ಕೃತಿಗಳು ಈ ಮಾತಿಗೆ ಉದಾಹರಣೆಯಾಗಿವೆ. ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾಗಿರುವ ಕೃಷ್ಣ ಪಾರಿಜಾತದಲ್ಲಿ ಕೃಷ್ಣ ಕೊರವಂಜಿಯಾಗುವ ಸನ್ನಿವೇಶವಿದೆ. ಇಲ್ಲಿನ ಕೊರವಂಜಿ ಸಕಲವನ್ನು ಬಲ್ಲ ಜ್ಞಾನಿ ಇಡೀ ದಕ್ಷಿಣ ಭಾರತದ ಸಾಹಿತ್ಯ ಹಾಗೂ ಸಾಂಸ್ಕೃತಿಕ ಸ್ವರೂಪವನ್ನು ಕೊರವಂಜಿ ದಟ್ಟವಾಗಿ ಆವರಿಸಿರುವುದು ಎಲ್ಲ ವಿವರಗಳಿಂದ ಖಚಿತವಾಗುತ್ತದೆ. ಉತ್ತರ ಕರ್ನಾಟಕಕ್ಕೆ ಸಿಮಿತವಾಗದೆ ದಕ್ಷಿಣ ಕರ್ನಾಟಕದ ಮಂಡ್ಯ ಜಿಲ್ಲೆಯಲ್ಲಿ ಕೊರವಂಜಿಯ ಕೋಲಾಟವು ವ್ಯಾಪಕವಾಗಿ ಕಾಣಬಹುದು. 'ಕೊರವಂಜಿ ಕೊಲಾಟ' ವಿಶೇಷ ಆಕರ್ಷಣೆ ಮತ್ತು ಮನ್ನಣೆ ಎರಡನ್ನು ಗಳಿಸಿಕೊಂಡಿದೆ. ಅಲ್ಲದೆ ಹಳೇಮೈಸೂರಿನ ಕೆಲಭಾಗಗಳಲ್ಲಿ ಈ ಕಲೆಯನ್ನು ಕಾಣಬಹುದು. ಈ ಕಲೆ ಹಾಡು ಮತ್ತು ಕುಣಿತದೊಂದಿಗೆ ಸಂಭಾಷಣೆಯೂ ಸೇರಿಕೊಂಡು ನೃತ್ಯರೂಪಕವಾಗಿ ಮನರಂಜಿಸುತ್ತದೆ. ಇಲ್ಲಿ ಶ್ರೀ ಕೃಷ್ಣ ಮತ್ತು ಆತನ ಪ್ರೇಯಸಿ ಸತ್ಯಭಾಮಾಳ ನಡುವೆ ಹೆಣೆದುಕೊಂಡಿರುವ ಕಥೆಯೇ ಮುಖ್ಯ ಆಧಾರ. ಕೊರವಂಜಿ ಕೋಲಿನ ಆಟದಲ್ಲಿ ಸಾಹಿತ್ಯದ ಸ್ವರೂಪವಿದೆ. ಹಾಡು, ಕಥನಗೀತೆ, ಓಡಲು, ಹೊಗಳಿಕೆ, ಬೈಗುಳ, ವ್ಯಂಗ್ಯ ಇಷ್ಟೇಲ್ಲಾ ಹಾಸುಹೊಕ್ಕಾಗಿದೆ. ಸಂಸಾರದಲ್ಲಿ ಸಾಮರಸ್ಯ ಇಲ್ಲದಿದ್ದರೆ ಎಂಥ ನಗೆಪಾಟಲು ಎಂಬುದನ್ನು ತೋರಿಸುತ್ತದೆ.

ಒಂದು ಪೌರಾಣಿಕ ಘಟನೆಯ ಕಥೆಯನ್ನು ತಮ್ಮ ವರ್ತಮಾನ ಕಾಲಕ್ಕೆ ಬಳಸಿಕೊಂಡು ನಿರೂಪಿಸುವ ನಮ್ಮ ಜನಪದರ ಜಾಣ್ಮೆ ತಿಳಿಯುತ್ತದೆ. ನೆಲವು,

ಕಸಬರಿಗೆ, ಸಿಂಬೆಹೆಣೆಯಲು ಹುಲ್ಲು ಹಾಗೂ ಪುಟ್ಟಿಹೆಣೆಯಲು ಕಟ್ಟಿಗೆಯಂಥ ಕಚ್ಚಾಸಾಮಾಗ್ರಿಗಳನ್ನು ಅರಣ್ಯದಿಂದ ತರುವುದು, ಹದಗೊಳಿಸುವುದು, ಉಪಯುಕ್ತ ವಸ್ತು ತಯಾರಿಸುವುದು. ಹೀಗೆ ಏಕಾಂಗಿಯಾಗಿ ತನ್ನ ವೃತ್ತಿ ಕಸಬುಗಳನ್ನು ನಿರ್ವಹಿಸುವ ವ್ಯಕ್ತಿತ್ವ ಹೊಂದಿದವಳು. ತಲೆಯ ಮೇಲೆ ಪುಟ್ಟಿ, ಬಗಲಿಗೆ ಜೋಳಿಗೆ, ಕಂಕುಳಕೂಸು, ಕೈಯಲ್ಲಿನ ಕಣಿಕೋಲು, ಕೊರವಂಜಿಯ ಅಲೆಮಾರಿ ಚಿತ್ರಣವನ್ನು ಎತ್ತಿ ತೋರಿಸುತ್ತವೆ. 'ಕೇರಿ ಕೇರಿಯೊಳಾಡುತ ಪಾಡುತ ವೈಯಾರದಿ ಮನೆ ಮನೆ ತಿರುಗುತಾ ನಾರಿ ಮಣಿಯರಿಗೆ ಶಕುನವ ಹೇಳುತಾ' ಎನ್ನ ಹಾಡಾಗಲಿ 'ಗಂಡನೆನಗಿಲ್ಲ ಹೆಂಡರನಾಳುವೆ ಗಂಡುಗಾರ್ತಿ ಕೊರವಂಜಿ ನಾನು' 'ಒರಲಿ ಒರಲಿ ಓರ್ವರನು ಬೇಡುವವಳಲ್ಲ ಬುಟ್ಟಿಯ ಮ್ಯಾಲಾಣೆ' 'ನೀ ನಿಡುವ ಮುತ್ತು ನನ್ನ ಮನಿ ಗ್ವಾಂಜಾಳಿಗೆ ಸಮ' ಈ ಎಲ್ಲ ಪ್ರಸಂಗಗಳು ಸಾಂಪ್ರದಾಯಕ ಸಮಾಜವು ಕೊರವಂಜಿಯ ಮೇಲೆ ಹೇರಿದ್ದ ಎಲ್ಲ ಹಂಗನ್ನು ಹರಿದುಕೊಂಡು ಕೊರವಂಜಿ ತನ್ನ ಸ್ವತಂತ್ರ ಹಾಗೂ ಸ್ವಾವಲಂಬಿ ವ್ಯಕ್ತಿತ್ವವನ್ನು ರೂಪಿಸಿಕೊಂಡದ್ದನ್ನು ಖಚಿತಪಡಿಸುತ್ತವೆ. ಸಾಮಾಜಿಕವಾಗಿ ಕೆಳಜಾತಿಗೆ ಸೇರಿದವಳಾದರೂ ಕಣಿ ಹೇಳುವ ಅರಿವಿನ ಕಾರಣವಾಗಿ ಕೊರವಂಜಿಗೆ ಸಿಗುವ ಸಾಮಾಜಿಕ ಸ್ಥಾನಮಾನಗಳು ವಿಶೇಷವಾಗಿವೆ. ಕೊರವಂಜಿಯು ಕಣಿಯನ್ನು ಹೇಳುವ ಶೈಲಿ ಮತ್ತು ಭಾಷೆಯು ಕೂಡಾ ಅಷ್ಟೇ ವಿಶಿಷ್ಟ ಸ್ಥಾನಮಾನ ಹೊಂದಿದೆ. ಹೀಗಾಗಿ ಜನರು ತಮ್ಮ ಬಗೆಗಿರುವ ದುಗುಡು ದುಮ್ಮಾನಗಳ ಕುರಿತು ಅವಳಿಂದ ಪರಿಹಾರ ಕಂಡುಕೊಳುವಂತಹ ರೀತಿ ಜನಸಾಮಾನ್ಯರಲ್ಲಿ ವಿಶೇಷವೆನಿಸಿದರು ಸಹ ಮಸಸ್ಸಿನ ಸರಿಯೆನಿಸುವ ಮತ್ತು ಮುಖನೋಡಿ ಹಾವಭಾವಗಳನ್ನು ಅರಿತು ಮುಂದಿನ ಭವಿಷ್ಯದ ಮಾತುಗಳನ್ನಾಡುವಳು ಈ ಕೊರವಂಜಿ. ಕೊರವಂಜಿಯೂ ದಿವ್ಯಜ್ಞಾನಿ ಕೊರವಿಯನ್ನಾಗಿ ಪರಿವರ್ತಿಸಿರುವ ಸಾಮಾನ್ಯ ಸಂಗತಿಯಾದರೂ ಕೆಳವರ್ಗದ ವಿವೇಕವನ್ನು ಸಂಸ್ಕೃತೀಕರಣಗೊಳಿಸಿದ ಸನ್ನಿವೇಶವನ್ನು ಹೇಳುತ್ತದೆ. ದೇಹ, ಮನಸ್ಸು, ಪಾವಿತ್ರತೆ, ಸೃಜನಶೀಲಗುಣ ಮತ್ತು ಲಿಂಗಭೇದವನ್ನು ಮೀರಿನಿಂತು ಸಾಮಾಜಿಕ ಮನ್ನಣೆ ಪಡೆದ ಅವಳ ವ್ಯಕ್ತಿತ್ವ ಬಹಳ ಮಹತ್ವದ್ದು ಎನ್ನಿಸುತ್ತದೆ. ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಕೊರವಂಜಿಗಳು ಹೇಳುವ ಭವಿಷ್ಯವನ್ನು ಜನಸಾಮಾನ್ಯರ ಪೂರ್ವಾಗ್ರಹ ಮತ್ತು ಮನಸ್ಥಿತಿಯನ್ನು ಅರಿತು ನುಡಿಯುತ್ತಾಳೆ. ಕೊರವಂಜಿಯ ಲೋಕಜ್ಞಾನ ಮತ್ತು ಆತ್ಮಾವಲೋಕನದ ಮಿತಿಯಲ್ಲಿ ಕಣಿಯನ್ನು ಹೇಳುವುದನ್ನು ಪರಂಪರೆಯಾಗಿ ಗುರುತಿಸಿಕೊಂಡಿರುವುದನ್ನು ಸಾಂಸ್ಕೃತಿಕ ಹಾಗೂ ಸಾಹಿತ್ಯಿಕ ಮನ್ನಣೆಯನ್ನು ಕನ್ನಡ ಸಾಹಿತ್ಯ ಕ್ಷೇತ್ರ ಮತ್ತು ಸಾಂಸ್ಕೃತಿಕ ಅಧ್ಯಯನಗಳ ಮೂಲಕ ಗುರುತಿಸಲ್ಪಡುತ್ತಾಳೆ. ಕನ್ನಡ ಸಾಹಿತ್ಯದಲ್ಲಿ ಕೊರವಂಜಿಯ ಮಾಸ ಪತ್ರಿಕೆಯ ಮೂಲಕ ಮಹಾನ್ ಪ್ರತಿಭೆಗಳನ್ನು ದೊರಕಿಸಿಕೊಟ್ಟ ಸಾಹಿತಿ ಡಾ. ಎಂ. ಶಿವರಾಂ ಅವರು. ಕೊರವಂಜಿ ಕಂಡ ನಗು ಸಮಾಜ, ಕೊರವಂಜಿ ಕಂಡ ನಗು ದರ್ಬಾರಿಗಳು ಹಾಗೂ ಕೊರವಂಜಿ ಕಂಡ ನಗು ವ್ಯಕ್ತಿಗಳು ಈ ಲೇಖನಗಳು ಕೊರವಂಜಿಯ ಪಡುವಣ ಯಾತ್ರೆ ಹಾಸ್ಯದ ಮೂಲಕ ಅವರ ಪಾಶ್ಚಾತ್ಯ ದೇಶಗಳ ಯಾತ್ರೆಯನ್ನು ಬಣ್ಣಿಸುವ ಸುಂದರ ಕಥನ. ಮುಖನೋಡಿ ಕೈಗೆರೆ ನೋಡಿ ಭವಿಷ್ಯ ನುಡಿಯುವಾಗಿನ ಇವರ ಮಾತಿನ ಮೋಡಿಗೆ ಮರುಳಾಗದವರಿಲ್ಲ. ಐತಿಹ್ಯ, ಪುರಾಣಗಳ ಹಿನ್ನೆಲೆಯನ್ನು ಆರೋಪಿಸಿಕೊಂಡು ಹೆಚ್ಚುಗಾರಿಕೆಯನ್ನು ತೋರಿಸಿಕೊಳ್ಳುವುದನ್ನು ಕಾಣಬಹುದು.

ಸಾಮಾನ್ಯವಾಗಿ ಎಲ್ಲಾ ಭಾಷಾ ಸಮುದಾಯದವರಿಗೂ ತಮ್ಮ ಭವಿಷ್ಯವನ್ನು ತಿಳಿದುಕೊಳ್ಳಲು ತುಂಬಾ ಕುತೂಹಲ ಇರುವುದು. ಅದಕ್ಕೆ ಆದಿವಾಸಿಗಳು ಹೊರತಲ್ಲ. ಇದಕ್ಕೆ ಅನೇಕ ವಿಧಾನಗಳನ್ನು ಅನುಸರಿಸುತ್ತಾರೆ. ಪಗಡೆ ದಾಳವನ್ನು ಉರುಳಿಸುವುದು, ಕವಡೆ ಹಾಕಿ ಕೇಳುವುದು,

ಬುಡಬುಡಕಿ ಶಬ್ಧವನ್ನು ಅನುಸರಿಸಿ ಕಣಿ ಹೇಳುವುದು ಹೀಗೆ ಹಲವಾರು ವಿಧಾನಗಳನ್ನು ಬಳಸಿ ಭವಿಷ್ಯ ಕೇಳುತ್ತಾರೆ. ಕಣಿ(ಶಕುನ)ದ ಬಗ್ಗೆ ಆದಿವಾಸಿಗಳಿಗೆ ನಂಬಿಕೆ ಹಾಗೂ ಸಾಂಸ್ಕೃತಿಕವಾಗಿ ಮಹತ್ವದ ಪ್ರಭಾವ ಬೀರುತ್ತದೆ. ಜನಜೀವನದ ನೈಜ ಚಿತ್ರಣ ಶಕುನ, ಕಣಿಗಳ ಮುಖ್ಯ ಕಾಳಜಿಗಳಲ್ಲೊಂದು. ಸಾಹಿತ್ಯದಲ್ಲಿ ಸಾಮಾಜಿಕ ಪ್ರಜ್ಞೆ ಬೇಕೆನ್ನುವವರಿಗೆ ಈ ಸಾಹಿತ್ಯವೂ ಒಂದು ಮಾದರಿಯೆನ್ನಬೇಕು. ಇಲ್ಲಿನ ವಾಸ್ತವಿಕತೆ ಉಪಮೆ, ಸಾಂಕೇತಿಕತೆ, ನಾಣ್ಣುಡಿ, ಬೆಡಗು, ಒಗಟು, ರೂಪಕ ಸೌಂದರ್ಯಗಳಿಂದ ಕೂಡಿದ್ದು ಇಲ್ಲಿ ಕಾಲಜ್ಞಾನ ಕವಿಗಳ ಕಾಲವಂತಿಕೆ ಸ್ಪಷ್ಟವಾಗಿ ಗೋಚರಿಸುತ್ತದೆ. ಹೀಗೆ ಶಕುನಗಳನ್ನು ಹೇಳುವ ಕೊರವಂಜಿಗಳು ಜನಗಳ ಮಧ್ಯದಲ್ಲಿದ್ದು ಯಾವುದೇ ಮುಚ್ಚುಮರೆಯಿಲ್ಲದೆ ಸಮಾಜದ ಓರೆಕೋರೆಗಳನ್ನು ಬಯಲಿಗೆಳೆಯುವ ನಿಷ್ಠುರವಾದಿ. ಒಕ್ಕಲಿಗನೇ ಮುಖ್ಯವಾಗಿ ಈ ದೇಶದ ಸಂರಕ್ಷಣಕರ್ತ, ದನಕರುಗಳಿಂದ ಒಕ್ಕಲುತನದ ಸಮೃದ್ಧಿ, ಆದರೆ ಆ ಸಂಪತ್ತನ್ನು ಹಣದಾಸೆಗೆ ಮಾರುವ ಒಕ್ಕಲಿಗನು ಒಕ್ಕಲಿಗನಲ್ಲ, ಅದನ್ನೇ ಕೊರವಂಜಿಗಳು 'ಛತ್ರಿಯ ಎತ್ತೆಮ್ಮೆ ಮಾರಿಯಾವು ಕೇಳಿರಣ್ಣ' ಎಂದಿದ್ದು ಇಂದಿನ ಈ ನೆರಳು ನಾಳೆ ಬಿಸಿಲಾಗಬಹುದೆಂಬ ಜಾಗೃತಿ ಇಲ್ಲಿ ಕಾಣಿಸಿದೆ. ಶಕುನ ಹೇಳುವ ಪದ್ಧತಿ ಮೂರ್ಖತನದಿಂದ ಕೂಡಿದ್ದು ಎಂದು ತಳ್ಳಿ ಹಾಕುವ ಬದಲು ಅದರ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡುವುದು ಅಗತ್ಯವಾಗಿರುತ್ತದೆ. ಸಂಗ್ಯಾ ಬಾಳ್ಯಾದಲ್ಲಿ ಕಂಡು ಬರುವ ಕೊರವಂಜಿಯ ಹೇಳಿಕೆಗಳು, ಶಕುನದ ಪರಿಣಾಮಗಳು ಎಲ್ಲವೂ ಸತ್ಯವಾಗಿಯೇ ಬಿಡುತ್ತವೆ. ಇದರಿಂದ ಕಣಿ ಹೇಳುವವರಲ್ಲಿ ಅತೀಂದ್ರಿಯ ಶಕ್ತಿ ಇದೆ ಎಂಬುದನ್ನು ಮೌನವಾಗಿಯೆ ಒಪ್ಪಬೇಕಾಗುತ್ತದೆ. ಕನ್ನಡ ಸಾಹಿತ್ಯದಲ್ಲಿ ಕೊರವಂಜಿ ಪಾತ್ರದ ಕಲ್ಪನೆ ಇದೆ. ಕೊರವಿ, ಮುಂದೆ ನಡೆಯುವ ವಿಷಯವನ್ನು ಮೊದಲೇ ಹೇಳುವ ಸಾಮರ್ಥ್ಯವುಳ್ಳವಳು. ಗಂಗಿಯನ್ನು ಕೈವಶಮಾಡಿಕೊಳ್ಳಲು ಸಂಗ್ಯಾ ಬಾಳ್ಯಾ ಕೊರವಂಜಿ ಹತ್ತಿರ ಹೋಗಿ ವಿಚಾರಿಸುತ್ತಾರೆ. ಕೊರವಂಜಿ ತನ್ನ ಸಾಮರ್ಥ್ಯವನ್ನು ಅವರಿಗೆ ತಿಳಿಸುತ್ತಾಳೆ.

***'ಆ ನಾಡಕೋರವೆಲ್ಲ ಈ ನಾಡ ಕೊರಿವೆಲ್ಲ–***
***ನಾ ದೇವ ಲೋಕದ ಕೋರಿವೆಮ್ಮ'***
***'ಕಂಡ ಕನಸನು ಬಲ್ಲೆ ಉಂಡ ಊಟವ ಬಲ್ಲೆ–***
***ಹಲ್ಲಿ ಸಕನಾ ಹೇಳಲು ಬಲ್ಲ ಕೊರಿವೆಮ್ಮ'***
***'ಆರ ಕಾಲಿನ ನೆಲವಾ ಅಂಗ್ಯಯಾಗ ಹಿಡಕೊಂಡ–***
***ದೇವಲೋಕದಿಂದ ಬಂದೇ ನಮ್ಮಾ'***
***'ಹರಸುವು ನಾ ಬಲ್ಲೆ ಹಚ್ಚುವುದು ನಾ ಬಲ್ಲೆ–***
***ಒಟ್ಟ ಹೆಣ್ಣ ಒಲಿಸುವುದು ನಾ ಬಲ್ಲೆ ನಮ್ಮಾ.***

ಕೊರವಂಜಿಯು ಸಂಗ್ಯಾನ ಸಮಸ್ಯೆಯನ್ನು ಕವಡಿಯ ಮೂಲಕ ಶುಭ–ಅಶುಭದ ಮಹತ್ವವನ್ನು ನುಡಿಯುತ್ತಾಳೆ. ಕೊನೆಗೆ ಕೊರವಿ ಹೇಳಿದ ಮಾತು ಸತ್ಯವಾಗುತ್ತದೆ. ಇಂಥಹ ಅಗೋಚರವಾದ ನಂಬಿಕೆಗಳು ಜನಪದರ ಜೀವನದಲ್ಲಿ ಪ್ರಮುಖ ಸ್ಥಾನ ಪಡೆದಿವೆ. ಶಕುನಗಳು ಭಾಷಾ ಸಮುದಾಯವನ್ನು ನಿಯಂತ್ರಿಸುವ ಅಧಮ್ಯ ಶಕ್ತಿಯನ್ನು ಹೊಂದಿವೆ.

**ಪರಾಮರ್ಶನ ಗ್ರಂಥಗಳು**


- ಅಂಗಡಿ, ಎಸ್.ಎಸ್. (2008). *ಮಾಟ–ಮಂತ್ರ–ಕಣಿ :ಭಾಷೆಯ ಸಮಾಜಿಕ ನೆಲೆ.* ಸೃಷ್ಟಿ ಪಬ್ಲಿಕೇಷನ್.
- ಅಮ್ಮಸಂದ್ರ ಸುರೇಶ. (2022, ಮೇ 11). *ಕಣಿ ಹೇಳೋರ ಭವಿಷ್ಯವೇ ಕತ್ತಲೆಯಲ್ಲಿ.* ಉದಯಕಾಲ ಪತ್ರಿಕೆ.
- ಬೋರಲಿಂಗಯ್ಯ. ಹಿ.ಚಿ. (2002). *ಕರ್ನಾಟಕ ಜನಪದ ಕಲೆಗಳ ಕೋಶ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ವೀರೇಶ ಬಡಿಗೇರ. (ಸಂ.) (2018). *ಕೊರವಂಜಿ ಸಂಕಥನ.* ಕನ್ನಡ ವಿಶ್ವವಿದ್ಯಾಲಯ.
- ಸುಮಿತ್ರ ಎಂ. (2008). *ಕಣಿಯರ ಸಂಸ್ಕೃತಿ.* ಮೈತ್ರೇಯಿ ಪ್ರಕಾಶನ.